# ತಬಲಾ ಲಯ ನಿಪುಣ ಪಂ. ರವೀಂದ್ರ

ಹಿಂದೂಸ್ತಾನಿ ಸಂಗೀತದಲ್ಲಿ ಎಂಥ ಘಟಾನುಘಟಿ ವಿದ್ವಾಂಸರೇ ಇರಲಿ – ಅವರ ಗಾಯನ, ವಾದನಕ್ಕೆ ಅತ್ಯಂತ ಸಮರ್ಥ ತಬಲಾ ಸಾಥಿ ನೀಡಿ ಸೈ ಅನ್ನಿಸಿಕೊಂಡವರು ಹಾಗೂ ಸೋಲೊ ಕಾರ್ಯಕ್ರಮಗಳಲ್ಲೂ ಸಹೃದಯರ ಮೆಚ್ಚುಗೆ ಗಳಿಸಿದವರು ಪಂ. ರವೀಂದ್ರ ಯಾವಗಲ್.

■ ಉಮಾ ಅನಂತ್



ಈ ವಿದ್ವಾಂಸರು ತಬಲಾ ಡಗ್ಗಾಗಳ ಮೇಲೆ ಬೋಲ್, ಠೇಕಾಗಳನ್ನು ನುಡಿಸಿದರೆಂದರೆ ಅದು ಕೇಳುಗರಿಗೆ ಅಕ್ಷರಶಃ ನಾದ ಹಬ್ಬ. ಲಯದಲ್ಲಿ ಪರಿಪೂರ್ಣತೆ–ಪರಿಪಕ್ವತೆ ಸಾಧಿಸಿದ ಈ ಘನ ವಿದ್ವಾಂಸರ ಬೆರಳುಗಳು ತಬಲಾ ಮೇಲೆ ನರ್ತಿಸುವುದನ್ನು ಕೇಳುವುದೇ ಶ್ರವಣಾನಂದಕರ! ತಬಲಾದ ಜೊತೆಗೆ ಅನ್ವರ್ಥನಾಮವಾಗಿಯೇ ಬೆಳೆದುಬಂದವರು ನಾಡಿನ ಹೆಸರಾಂತ ತಬಲಾ ವಾದಕ ಪಂ. ರವೀಂದ್ರ ಯಾವಗಲ್. ಪಂ. ಭೀಮಸೇನ ಜೋಶಿ, ಗಂಗೂಬಾಯಿ ಹಾನಗಲ್, ಮಲ್ಲಿಕಾರ್ಜುನ ಮನ್ಸೂರ, ಹರಿಪ್ರಸಾದ್ ಚೌರಾಸಿಯ, ವಿದುಷಿ ಗಿರಿಜಾದೇವಿ, ಪಂ. ರಾಜನ್ ಸಾಜನ್ ಮಿಶ್ರಾ ಮುಂತಾದ ಸಂಗೀತ ದಿಗ್ಗಜರಿಗೆ ಸಮರ್ಥವಾದ ತಬಲಾ ಸಾಥಿ ನೀಡಿ ಅವರಿಂದ ಬೆನ್ನು ಚಪ್ಪರಿಸಿಕೊಂಡವರು ಪಂ. ಯಾವಗಲ್.

ತಮ್ಮ ನಾದಪಯಣದ ರಸನಿಮಿಷಗಳನ್ನು ಅಷ್ಟೇ ರಸವತ್ತಾಗಿ 'ಸುಧಾ' ಓದುಗರೊಂದಿಗೆ ಹಂಚಿಕೊಂಡಿದ್ದಾರೆ ಪಂ. ಯಾವಗಲ್.

◆ **ಶಾಸ್ತ್ರೀಯ ಸಂಗೀತದಲ್ಲಿರುವ ಹಿಂದೂಸ್ತಾನಿ–ಕರ್ನಾಟಕ ಎಂಬ ಎರಡು ವಿಭಿನ್ನ ಶೈಲಿಗಳಲ್ಲಿ ಪ್ರಸ್ತುತ ಕೇಳುಗರ ಒಲವು ಯಾವುದರ ಕಡೆಗೆ ಹೆಚ್ಚು ಇದೆ?**

ಕಲೆಯ ದೃಷ್ಟಿಯಿಂದ ನೋಡಿದರೆ ಹಿಂದೂಸ್ತಾನಿ–ಕರ್ನಾಟಕ ಸಂಗೀತ ಎರಡೂ ರೀತಿಯ ಸಂಗೀತ ಕೇಳುವ ಸಹೃದಯರಿದ್ದಾರೆ. ಎರಡೂ ಪ್ರಕಾರಗಳನ್ನು ಕೇಳುವ ಜುಗಲ್‌ಬಂದಿ ಕಛೇರಿ ಇದ್ದರೆ ಕೇಳುಗರಿಗೂ ಎರಡೂ ಶೈಲಿಯನ್ನು ಕೇಳುವ ಸುಯೋಗ ಸಿಗುತ್ತದೆ. ಸಂಗೀತ ಆಸ್ವಾದನೆಯಿಂದ ಕೇಳಿ ತಿಳಿದುಕೊಳ್ಳುವುದು ಬಹಳಷ್ಟು ಇದೆ. ಈ ಎರಡೂ ಪ್ರಕಾರಗಳು ಭಿನ್ನ. ಒಂದು ಹೆಚ್ಚು, ಇನ್ನೊಂದು ಕಡಿಮೆ ಎಂಬ ಗೋಡೆ ಒಡೆಯುವ ಅವಕಾಶವೂ ಇದರಿಂದ ಸಿಗುತ್ತದೆ. ಎರಡೂ ಸಂಗೀತಗಳಲ್ಲಿ